ಡಾ॥ ಅಮೂಲ್ಯರೆಡ್ಡಿ ವರದಿ ಜಾರಿ

1768 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ॥ ಅಮೂಲ್ಯ ರೆಡ್ಡಿಯವರು ಕೆ.ಇ.ಬಿ. ಕಾರ್ಯವೈಖರಿ ಬಗ್ಗೆ ನೀಡಿರು ವರದಿ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ವರದಿಯ ಅಂಶಗಳ ಬಗ್ಗೆ ಸರ್ಕಾರವು ಏನು ಕ್ರಮಕೈಗೊಂಡಿದೆ.

ಇ) ಸಾಗಾಣಿಕೆ ನಷ್ಟ, ರೈತರ ಪಂಪು ಸೆಟ್‌ಗೆ ನೀಡುತ್ತಿರುವ ವಿದ್ಯುತ್ ಪ್ರಮಾಣ, ಕಳ್ಳತನದ ಬಗ್ಗೆ ಈ ಸಮೀಕ್ಷೆ ನೀಡಿರುವ ವರದಿಯನ್ನು ಸರ್ಕಾರವು ಒಪ್ಪಿಕೊಂಡು ಕೆ.ಇ.ಬಿ. ನಿರ್ವಹಣೆ ಬಗ್ಗೆ ಅಳವಾದ ಅಧ್ಯಯನ ಮಾಡಲು ಒಂದು ತಜ್ಞರ ಸಮಿತಿ ನೇಮಿಸಲಾಗುವುದೇ?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಈ ಸಂಬಂಧವಾಗಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಯಾವುದೇ ವರದಿಯು ಸಲ್ಲಿಸಲ್ಪಟ್ಟಿರುವುದಿಲ್ಲ.

ಆದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪ್ರೊಫೆಸರ್‌ರವರು ವರ್ತಮಾನ ಪತ್ರಿಕೆಗಳ ಮೂಲಕ ವ್ಯಕ್ತಪಡಿಸಿರುವ ಕೆಲವು ಅಭಿಪ್ರಾಯಗಳನ್ನು ಗಮನಿಸಿದೆ. ರಾಜ್ಯ ಯೋಜನಾ ಮಂಡಳಿಯ ಮುಂದೆ ಡಾ॥ ಅಮೂಲ್ಯರೆಡ್ಡಿಯವರು ಒಂದು ನಿರೂಪಣೆ (ಪ್ರೆಸೆಂಟೇಷನ್) ಯನ್ನು ಮಾಡಿದ್ದು, ಆ ಸಂದರ್ಭದಲ್ಲಿ ಮಂಡಳಿಯ ಅಧ್ಯಕ್ಷರು ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಆ) ವಿದ್ಯುತ್ ಪ್ರಸರಣೆ ಮತ್ತು ವಿತರಣೆಯಲ್ಲಿನ ನಷ್ಟ ಮತ್ತು ವಿದ್ಯುತ್ ಕಳವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಲೆಕ್ಕಾಚಾರ ಮಾಡುತ್ತಿದೆಯೆಂದು ಡಾ॥ ಅಮೂಲ್ಯ ರೆಡ್ಡಿಯವರು ಅಭಿಪ್ರಾಯ ಪಟ್ಟಿದ್ದಾರೆ.

ರಾಜ್ಯದಲ್ಲಿ 10 ಲಕ್ಷ ಕ್ಕೂ ಮೀರಿ ನೀರಾವರಿ ಪಂಪು ಸೆಟ್ಟುಗಳಿದ್ದು ರಾಜ್ಯ ಸರ್ಕಾರದ ನೀತಿಯನುಸಾರ ಇವುಗಳಿಗೆ ಮೀಟರ್‌ಗಳನ್ನು ಅಳವಡಿಸಿರುವುದಿಲ್ಲ. ಆದ್ದರಿಂದ, ವಿದ್ಯುತ್ ಮೀಟರ್‌ಗಳನ್ನು ಅಳವಡಿಸದೇ ಇರುವ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯನ್ನು ಲೆಕ್ಕಾಚಾರ ಮಾಡಲು ಮತ್ತು ಅಂತಿಮವಾಗಿ ವಿದ್ಯುತ್ ಪ್ರಸರಣೆ ಮತ್ತು ವಿತರಣೆ ನಷ್ಟವನ್ನು ಅಂತಿಮವಾಗಿ ನಿರ್ಧರಿಸಲು, ಈ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವ ಗ್ರಾಮಾಂತರ ಪ್ರದೇಶಗಳಲ್ಲಿರುವ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಲ್ಲಿ ಮೀಟರ್‌ಗಳನ್ನು ಅಳವಡಿಸಿ ಪ್ರತಿ ತಿಂಗಳು ಮೀಟರ್ ರೀಡಿಂಗ್ ತೆಗೆದುಕೊಂಡು ಪ್ರತೀ ನೀರಾವರಿ ಪಂಪುಸೆಟ್ಟು

ವರ್ಷದಲ್ಲಿ ಬಳಸುವ ವಿದ್ಯುತ್ತಿನ ಸರಾಸರಿ ಪ್ರಮಾಣವನ್ನು ನಿರ್ಧರಿಸಿ ಇದರಿಂದ ರಾಜ್ಯದಲ್ಲಿ ನೀರಾವರಿ ಪಂಪುಸೆಟ್ಟುಗಳು ಬಳಸಿದ ಒಟ್ಟಾರೆ ವಿದ್ಯುತ್ ಪ್ರಮಾಣವನ್ನು ಲೆಕ್ಕಾಚಾರ ಮಾಡಲಾಗುತ್ತಿದೆ ಮತ್ತು ವಿದ್ಯುತ್ ಪ್ರಸರಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ನಿರ್ಧರಿಸಲಾಗುತ್ತಿದೆ. ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳು ತೋಡು ಬಾವಿ ಮತ್ತು ಕೊಳವೆ ಬಾವಿಗಳಿರಡರಲ್ಲೂ ಅಳವಡಿಸಲಾಗುವ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜನ್ನು ಮಾಡುತ್ತದೆ. ಪ್ರತೀ ಪಂಪುಸೆಟ್ಟುಗೆ ಮೀಟರ್‌ನ್ನು ಅಳವಡಿಸದೇ ಇರುವುದರಿಂದ, ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆಯ ಪ್ರಮಾಣವನ್ನು ಲೆಕ್ಕಾಚಾರ ಮಾಡಲು ಇದಕ್ಕಿಂತ ಬೇರೆ ಉತ್ತಮ ಮಾರ್ಗ ಇರುವುದಿಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಈಗ ಪ್ರಥಮ ಹಂತದಲ್ಲಿ ರಾಜ್ಯದ ಪ್ರತೀ ಭಾಗದಲ್ಲಿ ಒಂದಂತೆ 4 ತಾಲ್ಲೂಕುಗಳ ಎಲ್ಲಾ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಮೀಟರ್‌ಗಳನ್ನು ಸುಮಾರು 14 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲು ಕ್ರಮ ತೆಗೆದುಕೊಂಡಿದೆ.

ಡಾ: ಅಮೂಲ್ಯ ರೆಡ್ಡಿಯವರು ಪ್ರಸ್ತುತ ಇಂಟರ್ ನ್ಯಾಷನಲ್ ಎನರ್ಜಿ ಇನಿಷಿಯೇಟೀವ್ (ಐಇಐ) ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಐಇಐ ಸಂಸ್ಥೆಯು ತನ್ನ ಮೊದಲ ವರದಿಯಲ್ಲಿ ಕೊಳವೆ ಬಾವಿಗಳಿಗೆ ಅಳವಡಿಸಲಾಗುವ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯು ಒಂದು ವರ್ಷದಲ್ಲಿ 10,000 ಯೂನಿಟ್ಟುಗಳೆಂದು ಮತ್ತು ತೋಡು ಬಾವಿಗಳ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯು ಒಂದು ವರ್ಷದಲ್ಲಿ3,000 ಯೂನಿಟ್‌ಗಳೆಂದು ತಿಳಿಸಿದೆ. ಕೋಲಾರ ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಮಾದರಿ ಮೀಟರ್ ಗಳನ್ನು ನೀರಾವರಿ ಪಂಪುಸೆಟ್ಟುಗಳಿಗೆ ಅಳವಡಿಸಿ, ಆ ಬಳಕೆಯ ಆಧಾರದ ಮೇಲೆ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯನ್ನು ನಿರ್ಧರಿಸಲಾಗಿದೆ. ಐಇಐ ಸಂಸ್ಥೆಯು ತನ್ನ ಮೊದಲ ವರದಿಯಲ್ಲಿ ರಾಜ್ಯದಲ್ಲಿರುವ ಒಟ್ಟು ನೀರಾವರಿ ಪಂಪುಸೆಟ್ಟುಗಳ ಸಂಖ್ಯೆಯ ಬಗ್ಗೆ ವಿಚಾರ ವೆಬ್ಬಿಸಿದ್ದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತಿಳಿಸುವ 9.05 ಲಕ್ಷಕ್ಕೆ ವಿರುದ್ಧವಾಗಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ದಾಖಲೆಗಳನ್ನು ಆಧರಿಸಿ 5.34 ಲಕ್ಷ ಮಾತ್ರವೆಂದು ತಿಳಿಸಿದೆ. ಕ.ವಿ. ಮಂಡಳಿಯು ತನ್ನ ಖರ್ಚಿನಲ್ಲಿ ಗಣತಿಯನ್ನು ಮಾಡಿದ ನಂತರ ರಾಜ್ಯದ ಒಟ್ಟು ನೀರಾವರಿ ಪಂಪು ಸೆಟ್ಟುಗಳ ಒಟ್ಟು ಸಂಖ್ಯೆಯು ಬಗ್ಗೆ ಮಂಡಳಿಯ ಅಂಕಿ ಅಂಶವನ್ನು ಸದರೀ ಸಂಸ್ಥೆಯು ಒಪ್ಪಿದೆ. ಆದರೆ ಕೊಳವೆ ಬಾವಿಗಳ ಸಂಖ್ಯೆಯು ಕೇವಲ ಶೇ 31 ರಷ್ಟಿರುವುದರಿಂದ, ಕಡಿಮೆ ಪ್ರಮಾಣದ ವಿದ್ಯುತ್ ಬಳಕೆಯನ್ನು ಸೂಚಿಸಲಾಗಿದೆ.

ಸದರಿ ಸಂಸ್ಥೆಯು ತನ್ನ ವರದಿಯಲ್ಲಿ ಕೊಳವೆ ಬಾವಿಗಳ ಸಂಖ್ಯೆ ಕೇವಲ3 ಲಕ್ಷ ಮಾತ್ರ ಆಗಿದ್ದು ಉಳಿದ 6 ಲಕ್ಷ ತೋಡು ಬಾವಿಗಳಾಗಿವೆಯೆಂದು ತಿಳಿಸಿದೆ. ಇದನ್ನು ಆಧರಿಸಿ, 94-95 ರ ಸಾಲಿನಲ್ಲಿ ಕ.ವಿ.ಮ. ಯು ಮಾದರಿ ಮೀಟರ್ ರೀಡಿಂಗ್‌ಗಳ ಮುಲಕ ಲೆಕ್ಕಾಚಾರ ಮಾಡಿರುವ 7298 ದಶಲಕ್ಷ ಯೂನಿಟ್‌ಗಳ ವಿರುದ್ಧವಾಗಿ ಒಟ್ಟಾರೆ ನೀರಾವರಿ ಪಂಪು ಸೆಟ್ಟುಗಳ ವಿದ್ಯುತ್ ಬಳಕೆಯ ಪ್ರಮಾಣವು ಕೇವಲ 5,000 ದಶಲಕ್ಷ ಯೂನಿಟ್‌ಗಳೆಂದು ಸೂಚಿಸಲಾಗಿದೆ.

ಹೀಗಾಗಿ ಪ್ರಮುಖ ವಿವಾದವು ತೋಡು ಬಾವಿ ಮತ್ತು ಕೊಳವೆ ಬಾವಿಗಳ ಸಂಖ್ಯೆಗಳ ಬಗ್ಗೆ ಉಂಟಾಗಿದೆ. ಒಣಪ್ರದೇಶಗಳನ್ನುಳ್ಳ ಜಿಲ್ಲೆಗಳಾದ, ಬೆಂಗಳೂರು, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಭಾಗಗಳು ಇತ್ಯಾದಿ ಇವುಗಳಲ್ಲಿ, ರಾಜ್ಯದ ಒಟ್ಟು ನೀರಾವರಿ ಪಂಪು ಸೆಟ್ಟುಗಳ ಶೇ: 60 ರಷ್ಟು ನೀರಾವರಿ ಪಂಪುಸೆಟ್ಟುಗಳಿದ್ದು, ಈ ನೀರಾವರಿ ಪಂಪುಸೆಟ್ಟುಗಳಲ್ಲಿ ಶೇ 90 ರಷ್ಟು ಕೊಳವೆ ಬಾವಿಗಳಲ್ಲಿ ಅಳವಡಿಸಲಾಗಿದೆಯೆನ್ನುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಆದ್ದರಿಂದ ಐಇಐ ಸಂಸ್ಥೆಯು ತಳೆದಿರುವ ನಿಲುವು ಸರಿಯೆನಿಸುವುದಿಲ್ಲ. ಕೊಳವೆ ಬಾವಿ ಮತ್ತು ತೋಡು ಬಾವಿಗಳ ಸಂಖ್ಯೆಗಳ ಬಗ್ಗೆ ನಿರ್ಧರಿಸಲು ಪ್ರತೀ ತಾಲ್ಲೂಕಿನ ಒಂದು ಹೋಬಳಿಯಲ್ಲಿರುವ ಕೊಳವೆ: ತೋಡು ಬಾವಿಗಳ ಸಮೀಕ್ಷೆ ಕಾರ್ಯವನ್ನು ತೆಗೆದು ಕೊಂಡಿದೆ.

ಹಾಲಿ ಲಭ್ಯವಿರುವ ಸಮೀಕ್ಷೆ ವರದಿಗಳಪ್ರಕಾರ ಐಇಐ ಸಂಸ್ಥೆಯ ಅಂಕಿ ಅಂಶಗಳು ಸರಿ ಇರುವುದಿಲ್ಲವೆಂದು ಕಂಡು ಬಂದಿದೆ. ಎಲ್ಲಾ ಹೋಬಳಿಗಳ ಸಮೀಕ್ಷೆ ವರದಿಗಳು ದೊರಕಿದ ನಂತರ ಸ್ಪಷ್ಟ ಚಿತ್ರ ಮೂಡುತ್ತದೆ.

ವಿದ್ಯಾ ಇಲಾಖೆಯ ಗ್ರಾಮಾಂತರ ಪ್ರದೇಶಗಳ ಶಾಲಾ ಉಪಾಧ್ಯಾಯರುಗಳ ಮೂಲಕ ಸಮೀಕ್ಷೆ ನಡೆಸಿ, ತೋಡು ಬಾವಿ ಮತ್ತು ಕೊಳವೆ ಬಾವಿಗಳ ಬಗ್ಗೆ ವಾಸ್ತವಿಕ ಅಂಕಿ ಅಂಶಗಳನ್ನು ಪಡೆಯಲು ಪ್ರಯತ್ನಗಳನ್ನು ಸಹ ಮಾಡಲಾಗುತ್ತಿದೆ.

ಇ) ಸರ್ಕಾರವು ಈ ಅಧ್ಯಾಯನದ ಬಗ್ಗೆ ಪ್ರಾರಂಭಿಸಿರುವುದಿಲ್ಲ. ಆದುದರಿಂದ ಇದರ ಅಂಗೀಕರಿಸುವುದಾಗಲಿ ಅಥವಾ ಅಂಗೀಕರಿಸದೇ ಇರುವುದಾಗಲೀ ಉದ್ಭವಿಸುವುದಿಲ್ಲ. ಕರ್ನಾಟಕದಲ್ಲಿ ಇಂಧನ : ವಿದ್ಯುತ್ ಕ್ಷೇತ್ರವನ್ನು ಪುನರ್‌ರಚಿಸುವ ಬಗ್ಗೆ ಪೂರ್ಣವಾಗಿ ಅಧಾಯನ ಮಾಡಲು ಎ.ಎಸ್.ಸಿ.ಐ. ನ ಅಧ್ಯಾಯನಕ್ಕೆ ಒಳಪಡುತ್ತವೆ.

(Administrative staff college of India Hyderabad).

ಅಧ್ಯಕ್ಷರು : ಮಂಡಿಸಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಟಿ.ಹೆಚ್. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಅಧೀನ ಶಾಸನ ರಚನಾ ಸಮಿತಿಯ ಅಧ್ಯಕ್ಷನಾದ ನಾನು ಸದರಿ ಸಮಿತಿಯ 22ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಸುಭಾಷ್ ಎಸ್. ಜೋಷಿ (ಅಧ್ಯಕ್ಷರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿಡಲಾದ ಕಾಗದಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ಸದರಿ ಸಮಿತಿಯ 15 ನೇ ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು.

ಅಧ್ಯಕ್ಷರು : ಒಪ್ಪಿಸಲಾಯಿತು.